ಆ) ಈ ವರ್ಷ ನಗರ ಪ್ರದೇಶದಲ್ಲಿ 735 ಕಿಮೀ. ರಸ್ತೆ ದುರಸ್ಥಿ ಮಾಡಲಾಗಿದೆ ಹಾಗೂ ಬಾಕಿ 61 ಕಿಮೀ. ರಸ್ತೆ ದುರಸ್ಥಿ ಕಾರ್ಯ ಪ್ರಗತಿಯಲ್ಲಿದೆ. ನಗರ ಪ್ರದೇಶದ ಇತರೆ ರಸ್ತೆ ನಿರ್ವಹಣೆಯನ್ನು ನಗರ ಸಭೆ ಹಾಗೂ ನಗರ ಮಹಾಪಾಲಿಕೆಗಳು ಕೈಗೊಳ್ಳುತ್ತವೆ.

ಇ) ಸದ್ಯಕ್ಕೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

706(93) : ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸೌರಶಕ್ತಿ ಗ್ರಾಮಗಳನ್ನು ರಚನೆ ಮಾಡಲು ಸರ್ಕಾರ ಮುಂದಾಗಿದೆಯೇ;

ಆ) ಅದಕ್ಕೆ ಯಾವ ಯಾವ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಮತ್ತು ಇದಕ್ಕೆ ತಗಲುವ ವೆಚ್ಚ ಎಷ್ಟು;

ಇ) ಈ ಯೋಜನೆ ಪೂರ್ಣಗೊಳ್ಳಲು ಕಾಲಮಿತಿಯನ್ನು ಮಾಡಿಕೊಳ್ಳಲಾಗಿದೆಯೇ;

ಈ) ಸದರಿ ಯೋಜನೆಯು ಈಗಾಗಲೇ ರಾಜ್ಯದ ಎಲ್ಲಾ ಕಡೆ ಅನುಷ್ಠಾನಗೊಂಡಿದೆಯೆ;

ಉ) ಇದರನ್ವಯ ವಿದ್ಯುತ್ ಸಂಪರ್ಕ ಹೊಂದಿಲ್ಲದ ಗ್ರಾಮಗಳ ಸಂಖ್ಯೆ ಮನೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡಿ)

ಊ) ಇಂತಹ ಸೌಲಭ್ಯವಿಲ್ಲದ ಗ್ರಾಮಗಳಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು.

ಆ) ಅನುಬಂಧ–1ರಲ್ಲಿ ವಿವರಗಳನ್ನು ಸಲ್ಲಿಸಿದೆ.

ಇ) ಹೌದು, ಅನುಬಂಧ 1ರಲ್ಲಿ ತಿಳಿಸಿದ 1 ರಿಂದ 10 ಗ್ರಾಮಗಳು ಈಗಾಗಲೇ ಸೌರಶಕ್ತಿಯಿಂದ ವಿದ್ಯುದ್ಧೀಕರಣಗೊಂಡಿರುತ್ತದೆ. 11ನೇ ಗ್ರಾಮವು ಫೆಬ್ರವರಿಯ ಕೊನೆಯ ವಾರದಲ್ಲಿ ಸೌರಶಕ್ತಿಯಿಂದ ವಿದ್ಯುದ್ದೀಕರಣಗೊಳ್ಳುತ್ತದೆ.

ಈ) ಸದರಿ ಯೋಜನೆಯನ್ನು ರಾಜ್ಯದ 8 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ವಿವರ ಅನುಬಂಧ 1 ರಲ್ಲಿದೆ.

ಉ) ಅನುಬಂಧ–2 ರಲ್ಲಿ ವಿವರಗಳನ್ನು ಸಲ್ಲಿಸಿದೆ.

ಊ) ಹೌದು, ಅಸಂಪ್ರದಾಯಕ ಇಂಧನ ಮೂಲಗಳ ಮಂತ್ರಾಲಯ, ನವದೆಹಲಿ ಇವರು 2012 ನೇ ಇಸವಿಯೊಳಗೆ ವಿದ್ಯುದ್ದೀಕರಣಗೊಳ್ಳದ ಎಲ್ಲಾ ಗ್ರಾಮಗಳು/ಮಜಿರೆಗಳನ್ನೂ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುದ್ದೀಕರಣಗೊಳಿಸಲು ಯೋಜನೆಯನ್ನು ಹಾಕಿಕೊಂಡಿದೆ. ಇದಕ್ಕೆ ತಗಲುವ ಒಟ್ಟು ವೆಚ್ಚದಲ್ಲಿ ಶೇ 90 ರಷ್ಟು ಹಣವನ್ನು ಅವರು ಭರಿಸುತ್ತಾರೆ ಇನ್ನುಳಿದ ಶೇ 10 ರಷ್ಟು ಹಣವನ್ನು ರಾಜ್ಯ ಸರ್ಕಾರವು ಭರಿಸಬೇಕಾಗುತ್ತದೆ. ಈ ಕಾರ್ಯಕ್ಕೆ ನಿರ್ದಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡು 2005–06ನೇ ಸಾಲಿಗೆ 1000 ಮಜಿರೆಗಳನ್ನು ಅಸಂಪ್ರದಾಯಕ ಇಂಧನ ಮೂಲಗಳಿಂದ ವಿದ್ಯುದ್ದೀಕರಣ ಗೊಳಿಸಲು ಯೋಜಿಸಲಾಗಿದೆ. ಉಳಿದ ಮಜಿರೆಗಳನ್ನು ಕ್ರಮೇಣ ಮುಂಬರುವ ವರ್ಷಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಅನುಬಂಧ–1

ಕ್ರಮ ಸಂ.	ಗ್ರಾಮದ ಹೆಸರು	ಜಿಲ್ಲೆಯ ಹೆಸರು	ಸೌರಶಕ್ತಿ ಮನೆದೀಪ ಗಳನ್ನು ಅಳವಡಿಸಿದ ಸಂಖ್ಯೆ	ಸೌರಶಕ್ತಿ ಬೀದಿ ದೀಪ ಗಳನ್ನು ಅಳವಡಿಸಿದ ಸಂಖ್ಯೆ	ಯೋಜನೆಯ ಒಟ್ಟು ಮೊತ್ತ(ರೂ)
1	ಹೆಚ್. ಕೋಡಿ ಹಳ್ಳಿ.	ಮಂಡ್ಯ	211	15	21,47,400/–
2	ಬೋಡ ಬಂದ,	ಗುಲ್ಬರ್ಗಾ	210	15	21,39,000/–
3	ಕೋಲೂರು ಗ್ರಾಮ,	ರಾಯಚೂರು	85	15	10,89,000/–
4	ಹೆಮ್ಮಕ್ಕಿ ಗ್ರಾಮ,	ಚಿಕ್ಕಮಗಳೂರು	87	10	9,80,800/–
5	ಹರದನ ಹಳ್ಳಿ,	ಹಾಸನ	150	20	17,60,000/–
6	ಕೂಡಲಗಿ,	ಗುಲ್ಬರ್ಗಾ	125	10	13,00,000/–
7	ಕಬ್ಬತ್ತಿ,	ಹಾಸನ	168	20	19,11,200/–
8	ಕವನಮರ,	ಬೆಂಗಳೂರು ಗ್ರಾಮಾಂತರ	300	15	28,95,000/–
9	ಕಾರವಾರದ ಮಜಿರೆಗಳು (ಅತುಗ, ಕುಚೆಗಾರ್ ಮತ್ತು ಕೋದರ್)	ಕಾರವಾರ	84	10	9,55,600/–
10	ಉರಗಹಳ್ಳಿ,	ಬೆಂಗಳೂರು ಗ್ರಾಮಾಂತರ	160	05	14,69,000/–
11	ಬಾಳೇನಹಳ್ಳಿ,	ಚಿತ್ರದುರ್ಗ	238	10	22,49,200/–
	ಒಟ್ಟು		1818	145	1,88,96,200/–

ಅನುಬಂಧ–2

ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸಂಪರ್ಕ ಇನ್ನೂ ಹೊಂದಿಲ್ಲದ ಗ್ರಾಮಗಳ ಸಂಖ್ಯೆ ಒಟ್ಟು–22 ವಿವರಗಳು ಕೆಳಕಂಡಂತಿವೆ.

ಕ್ರಮ ಸಂಖ್ಯೆ	ಜಿಲ್ಲೆ	ಗ್ರಾಮಗಳ ಸಂಖ್ಯೆ	ಒಟ್ಟು ಮನೆಗಳ ಸಂಖ್ಯೆ
1.	ಮೈಸೂರು	2	25
2.	ಚಾಮರಾಜ ನಗರ	1	80

3.	ಉತ್ತರ ಕನ್ನಡ	15	623
4.	ಬೆಳಗಾಂ	4	71
	ಒಟ್ಟು	22	799

ವಿದ್ಯುತ್ ಸಂಪರ್ಕ ಹೊಂದಿಲ್ಲದ ಜಿಲ್ಲಾವಾರು ಮಜಿರೆಗಳ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಜಿಲ್ಲೆ	ಮಜಿರೆಗಳ ಸಂಖ್ಯೆ
1	ಬೆಂಗಳೂರು ಗ್ರಾಮೀಣ	754
2	ಬೆಳಗಾಂ	255
3	ಬಳ್ಳಾರಿ	76
4	ಬಿಜಾಪುರ	218
5	ಚಾಮರಾಜ ನಗರ	149
6	ಚಿಕ್ಕಮಗಳೂರು	575
7	ಚಿತ್ರದುರ್ಗ	104
8	ದಕ್ಷಿಣ ಕನ್ನಡ	1029
9	ದಾವಣಗೆರೆ	104
10	ಧಾರವಾಡ	28
11	ಗುಲ್ಬರ್ಗಾ	265
12	ಹಾಸನ	1397
13	ಹಾವೇರಿ	05
14	ಕೊಡಗು	42
15	ಕೋಲಾರ	118
16	ಕೊಪ್ಪಳ	50
17	ಮಂಡ್ಯ	15
18	ಮೈಸೂರು	195
19	ರಾಯಚೂರು	580
20	ಶಿವಮೊಗ್ಗ	894
21	ತುಮಕೂರು	200
22	ಉಡುಪಿ	108
23	ಉತ್ತರ ಕನ್ನಡ	358
	ಒಟ್ಟು	**7519**

ಕರ್ನಾಟಕ ರಾಜ್ಯದಲ್ಲಿ ಒಟ್ಟು ಅಂದಾಜು 22 ಲಕ್ಷ ಮನೆಗಳು ವಿದ್ಯುದ್ದೀಕರಣ ಹೊಂದಿಲ್ಲದೆ ಇರುತ್ತವೆ.

ಮೇಲೆ ತಿಳಿಸಿದ ವಿವರಗಳಲ್ಲಿ ಮೈಸೂರು ಚಾಮರಾಜನಗರ ಮತ್ತು ಉತ್ತರ ಕನ್ನಡ ಜಿಲ್ಲೆಯ 18 ಗ್ರಾಮಗಳು ಮತ್ತು ಉತ್ತರ ಕನ್ನಡ ಜಿಲ್ಲೆಯ 8 ಮಜಿರೆಗಳನ್ನು ಸೌರಶಕ್ತಿಯಿಂದ ವಿದ್ಯುದ್ದೀಕರಣಗೊಳಿಸಲು ಅಸಂಪ್ರದಾಯಿಕ ಇಂಧನಮೂಲಗಳ ಮಂತ್ರಾಲಯ ನವದೆಹಲಿ, ಇವರಿಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಅವರಿಂದ ಅನುಮತಿ ಬಂದ ಕೂಡಲೇ ಈ ಕಾರ್ಯವನ್ನು 2004–05ನೇ ಸಾಲಿನಲ್ಲಿಯೇ ತೆಗೆದುಕೊಳ್ಳಲಾಗುವುದು.

707(97) : ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಂದಾಯ ಭೂಮಿ ಕಾಯ್ದೆಗೆ ತಿದ್ದುಪಡಿ ತರಲು ಸರ್ಕಾರ ಚಿಂತಿಸುತ್ತಿದೆಯೇ; ತಿದ್ದುಪಡಿ ತರಲು ಕಾರಣಗಳೇನು;

ಆ) ಯಾವ ಯಾವ ವಿಚಾರಗಳಿಗೆ ಸಂಬಂಧಪಟ್ಟಂತೆ ತಿದ್ದುಪಡಿ ತರಲಾಗುವುದು;

ಇ) ಈ ರೀತಿ ತಿದ್ದುಪಡಿ ಮಾಡುವುದರಿಂದ ರೈತರು ಈಗಾಗಲೇ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳಬಹುದೆ;

ಈ) ಇದರಿಂದ ರೈತರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಇಲ್ಲ. ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

708(99) ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಜರಾಯಿ ಕಾನೂನಿಗೆ ತಿದ್ದುಪಡಿ ತರಲು ಸರ್ಕಾರ ನಿರ್ಧರಿಸಿದೆಯೇ; ತಿದ್ದುಪಡಿಗೆ ಕಾರಣಗಳೇನು;

ಆ) ಯಾವ ವಿಚಾರಕ್ಕೆ ಸಂಬಂಧಪಟ್ಟಂತೆ ತಿದ್ದುಪಡಿ ತರಲಾಗುವುದು;

ಇ) ಹಾಲಿ ಇರುವ ಕಾನೂನಿನ ಚೌಕಟ್ಟಿನೊಳಗೆ ಬಡ ದೇವಸ್ಥಾನಗಳನ್ನು ಅಭಿವೃದ್ಧಿಗೊಳಿಸಲು ಸಾಧ್ಯವಿಲ್ಲವೇ;

ಈ) ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಪರಿಶೀಲನೆಯಲ್ಲಿರುತ್ತದೆ. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ನ್ನು ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಉಂಟಾಗಿರುವ ತೊಂದರೆಗಳನ್ನು ನಿವಾರಿಸುವ ದೃಷ್ಟಿಯಿಂದ ತಿದ್ದುಪಡಿ ತರಲು ಉದ್ದೇಶಿಸಿದೆ;